ನೀರಿನ ಜೊತೆಗೇ ನಡೆಯುತ್ತಾ ಇದೆ. ಮುರಾರ್ಜಿ ದೇಸಾಯಿಯವರು ಸ್ವಮುತ್ರಪಾನ ಮಾಡುವುದರಿಂದ ಆರೋಗ್ಯಕ್ಕೆ ಒಳ್ಳೆಯದಾಗುತ್ತದೆ ಎನ್ನುವುದನ್ನು ಪ್ರಯೋಗ ಮಾಡಿ ಕಂಡುಕೊಂಡು, ಅವರ ಪುಸ್ತಕದಲ್ಲಿ ಬರೆದಿದ್ದರು. ಬಹುಶಃ ಅದರಿಂದ ಪ್ರೇರಣೆ ಪಡೆದೇ ಏನೋ ಎಲ್ಲರ ಮೂತ್ರವನ್ನೂ ಒಟ್ಟು ಸೇರಿಸಿ ಚಿಕ್ಕಮಗಳೂರು ನಗರದ ಒಂದು ಲಕ್ಷ ಜನರಿಗೆ ಕುಡಿಸತಕ್ಕ ಕೆಲಸವನ್ನು ಈ ಸರ್ಕಾರ ಮಾಡುತ್ತಾ ಇದೆ. ಹಾಗಾಗಿ, ನಮಗೆ ಈ ಮುರಾರ್ಜಿ ದೇಸಾಯಿಯವರ ಮಾದರಿಯನ್ನು ಅನುಸರಿಸಿದರೆ, ಹಾನಿ ಅಥವಾ ಲಾಭ ಅವರವರಿಗೇ ಆಗುತ್ತದೆ. ಆದರೆ, ಎಲ್ಲರ ಮೂತ್ರವನ್ನೂ ಕುಡಿಸುವುದರಿಂದ ಆರೋಗ್ಯ ಕೆಟ್ಟುಹೋಗುವುದು ಗ್ಯಾರಂಟಿ. ಹಾಗಾಗಿ ಸಬೂಬು ಹೇಳದೇ, ಇದು ಸರ್ಕಾರದ ಕರ್ತವ್ಯ ಇದೆ. ಒಳ್ಳೆಯ ಶುದ್ದೀಕರಣವಾದ ನೀರನ್ನು ಕೊಡತಕ್ಕಂಥಾದ್ದು ಸರ್ಕಾರದ ಕರ್ತವ್ಯ. ಇವತ್ತು ಎಲ್ಲಾ ನಗರಸಭೆಗಳ ಸ್ಥಿತಿ ಏನಿದೆ ಎಂದರೆ, ಅವರು ಇಂತಹ ಎಲ್ಲಾ ಕೆಲಸಗಳನ್ನು ಮೆಯಿನ್‌ಟೇನ್ ಮಾಡುವ ಸ್ಥಿತಿಯಲ್ಲಿ ಅವರು ಇಲ್ಲ. ಹಾಗಾಗಿ ಚಿಕ್ಕಮಗಳೂರು ನಗರಸಭೆಯವರು 25 ಲಕ್ಷ ರೂ ಕಟ್ಟುವುದಿಲ್ಲ, ಇವರು ಎಲ್ಲರ ಮೂತ್ರ ಕುಡಿಸುವುದು ಬಿಡುವುದಿಲ್ಲ. ಹಾಗಾಗಿ, ಇವರೇ ನೇರವಾಗಿ ಕೈಗೆತ್ತಿಕೊರಿಡು ಕಾರ್ಯ ಮಾಡುವುದಕ್ಕೆ ನಿರ್ದೇಶನ ಕೊಡಬೇಕೆಂದು ನನ್ನ ವಿನಂತಿ.

ಶ್ರೀ ಆರಗ ಜ್ಞಾನೇಂದ್ರ : ಚಿಕ್ಕಮಗಳೂರಿನವರಿಗೆ ಸ್ವಮೂತ್ರ ಇಲ್ಲ, ಪರ ಮೂತ್ರ ಕುಡಿಸುತ್ತಾ ಇದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಏರಿಯೇಟೆಡ್ ಲಗೂನ್ಸ್ ಕೆಟ್ಟು ಹೋಗಿರುವುದರಿಂದ, ಅದರ ನಿರ್ವಹಣೆ ಕೆಲಸ ಮುನಿಸಿಪಾಲಿಟಿಯವರದು ಎಂದು ನಾನು ಆಗಲೇ ಹೇಲಿದೆ. ಅಲ್ಲಿ ನೀರು ಬೇಸಿಗೆಯಲ್ಲಿ ಮಾತ್ರ ನಾಲೆಯಲ್ಲಿ ಬಿಡುತ್ತಾರೆ, ಅದನ್ನು ರೈತರು ಉಪಯೋಗ ಮಾಡುವುದರಿಂದ, ನದಿಯಲ್ಲಿ ಅಥವಾ ಆ ಜಲಾಶಯದಲ್ಲಿ ಸಂಪೂರ್ಣವಾಗಿ ಹೋಗುತ್ತಾ ಇಲ್ಲ. ಆದರೂ ಕೂಡ ಸರ್ಕಾರದವರು ಒಂದು ಹೊಸ ಯೋಜನೆಗೆ ರೂಪುರೇಷೆ ಮಾಡುತ್ತಾ ಇದ್ದೇವೆ. ಅಂದರೆ, ಚಿಕ್ಕಮಗಳೂರಿನಲ್ಲಿರತಕ್ಕ ಹೊಸ ಬಡಾವಣೆ ಮತ್ತು ಇಲ್ಲಿ ಈಗ ಇರತಕ್ಕಂಥಾದ್ದು ಒಳಚರಂಡಿ ಭಾಗಶಃ ಇವೆ. ಅದನ್ನು ಸಂಪೂರ್ಣವಾಗಿ ಮುಗಿಸುವುದಕ್ಕೆ ಹೊಸ ರೂಪುರೇಷೆಯನ್ನು ಮಾಡಿದ್ದೇವೆ, ಇದನ್ನು ಎರಡು ವರ್ಷಗಳಲ್ಲಿ ಸಂಪೂರ್ಣವಾಗಿ ಮುಗಿಸಿಕೊಡುತ್ತೇವೆಂದು ಹೇಳುತ್ತೇನೆ.

ನರಸಿಂಹರಾಜಪುರ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆ.

148 (2189) ಶ್ರೀ ಜೀವರಾಜ್ ಡಿ ಎನ್ (ಶೃಂಗೇರಿ) ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ನರಸಿಂಹರಾಜಪುರ ಪಟ್ಟಣಕ್ಕೆ ಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜು ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;
2. ಇದ್ದಲ್ಲಿ, ಈ ಯೋಜನೆಯ ಅಂದಾಜು ವೆಚ್ಚವೆಷ್ಟು;
3. ಈ ಯೋಜನೆಗೆ ಕೇಂದ್ರ ಸರ್ಕಾರದ ನೆರವು ಮಂಜೂರು ಆಗಿದೆಯೇ;
4. ಈ ಯೋಜನೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್.ಆರ್.ಮೋರೆ : (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು)

1. ಇದೆ.

2. ಈ ಯೋಜನೆಯ ಅಂದಾಜು ಮೊತ್ತವು ರೂ.605.00 ಲಕ್ಷಗಳು.

3. ಹೌದು.

4. ಕಾಮಗಾರಿಯನ್ನು ಮಂಜೂರಾತಿ ಪಡೆದ ನಂತರ ಪ್ರಾರಂಭಿಸಲಾಗುವುದು.

ಶ್ರೀ ಡಿ.ಎನ್.ಜೀವರಾಜ್ : ಸಭಾಧ್ಯಕ್ಷರೆ, ನನ್ನ ಮೊದಲ ಪ್ರಶ್ನೆಗೆ ಉತ್ತರವಾಗಿ "ಇದೆ" ಎಂದೂ, ಎರಡನೇ ಪ್ರಶ್ನೆಗೆ ಈ ಯೋಜನೆಗೆ ಅಂದಾಜು ವೆಚ್ಚ 605 ಲಕ್ಷಗಳು ರೂ ಮತ್ತು ಮೂರನೇ ಪ್ರಶ್ನೆಗೆ ಕೇಂದ್ರ ಸರ್ಕಾರದ ನೆರವು ಮಂಜೂರಾಗಿದೆ ಎಂದು ಹೇಳಿದ್ದಾರೆ. ನಾಲ್ಕನೇ ಪ್ರಶ್ನೆಗೆ, ಮತ್ತೆ "ಮಂಜೂರಾತಿ ಪಡೆದ ಮೇಲೆ ಕಾಮಗಾರಿ ಪ್ರಾರಂಭಿಸಲಾಗುವುದು" ಎಂಬ ಆಶ್ಚರ್ಯಕರ ಉತ್ತರವನ್ನು ಹೇಳುತ್ತಾರೆ. ಒಂದು ಕಡೆ ಮಂಜುರಾಗಿದೆ ಎಂದು ಇವರೇ ಉತ್ತರ ಕೊಟ್ಟು, ನಾಲ್ಕನೇ ಪ್ರಶ್ನೆಗೆ ಮಂಜುರಾದ ಮೇಲೆ ಪ್ರಾರಂಭಿಸುತ್ತೇವೆಂದು ಹೇಳುವುದು ಆಶ್ಚರ್ಯ. ಜೊತೆಗೆ, ಎನ್ ಆರ್.ಪುರದಲ್ಲಿ ಭದ್ರಾ ಮುಳುಗಡೆ ನಿರು ಏನಿದೆ 1947ನೇ ಇಸವಿಗಿಂತ ಮುಂಚೆ ನಮ್ಮ ಎನ್.ಆರ್.ಪುರಕ್ಕೆ ರೈಲು ಬರುತ್ತಾ ಇತ್ತು. ಈ ಭದ್ರಾ ಡ್ಯಾಮ್ ಕಟ್ಟಿದ್ದರಿಂದ ಈಗ ರೈಲೂ ಇಲ್ಲ, ಕುಡಿಯುವುದಕ್ಕೆ ನೀರು ಇಲ್ಲದಂಥ ಪರಿಸ್ಥಿತಿ ಆಗಿದೆ. ಕಡೇಪಕ್ಷ ಈ ಡ್ಯಾಮಿನಿಂದಲಾದರೂ ಆ ನೀರು ತೆಗೆಯುವುದಕ್ಕೆ ಶೀಘ್ರಗತಿಯಲ್ಲಿ ಸಚಿವರು ಚಾಲನೆ ಕೊಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ದಯಮಾಡಿ ಇದಕ್ಕೆ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಇದು ಕೇಂದ್ರ ಸರ್ಕಾರದ ತ್ವರಿತ ನೀರು ಸರಬರಾಜು ಯೋಜನೆಯಡಿಯಲ್ಲಿ ನಮ್ಮ ರಾಜ್ಯಕ್ಕೆ ಸುಮಾರು 8 ಊರುಗಳಿಗೆ ಈಗಾಗಲೇ ಹಣ ಬಿಡುಗಡೆ ಮಾಡಿದ್ದಾರೆ. ಇದು ನಮಗೆ ಹೋದ ಡಿಸೆಂಬರ್‌ಗೆ ಗೊತ್ತಾಗಿದೆ. ಆದ್ದರಿಂದ, ಬರುವ ವರ್ಷ ಈ ತ್ವರಿತ ನೀರು ಸರಬರಾಜಿಗೆ ನಮ್ಮ ಗ್ರಾಂಟ್ ಮತ್ತು ಕೇಂದ್ರ ಸರ್ಕಾರ ಏನು ಬಿಡುಗಡೆ ಮಾಡಿದ ಎರಡೂ ಸೇರಿ, ಬರುವ ವರ್ಷದಲ್ಲಿ ಸಂಪೂರ್ಣವಾಗಿ ಅದನ್ನು ಮುಗಿಸಿಕೊಡುತ್ತೇವೆಂದು ಈ ಸದನದಲ್ಲಿ ಹೇಳುತ್ತೇನೆ.

ಮಾಹಿತಿ ತಂತ್ರಜ್ಞಾನ ಪಾರ್ಕ್ ಸ್ಥಾಪಿಸುವುದು.

149(2032) ಶ್ರೀ.ರಾಜೇಂದ್ರನ್ ಎಸ್.(ಕೆ.ಜಿ.ಎಫ್) ಮಾನ್ಯ ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಕೋಲಾರ ಜಿಲ್ಲೆಗೆ ಮಾಹಿತಿ ತಂತ್ರಜ್ಞಾನ ಪಾರ್ಕನ್ನು ಸ್ಥಾಪಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

ಆ. ಇಂದಿನ ವಿಜ್ಞಾನ ಯುಗದಲ್ಲಿ ಹಿಂದುಳಿದ ಪ್ರದೇಶವಾದ ಕೋಲಾರಕ್ಕೆ ಅದರಲ್ಲೂ ಮುಖ್ಯವಾಗಿ ಕೆ.ಜಿ.ಎಫ್.ನಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕನ್ನು ತೆರೆಯುವುದಕ್ಕೆ ಸರ್ಕಾರ ಯೋಚಿಸಿದೆಯೇ;

ಇ. ಹಾಗಿದ್ದಲ್ಲಿ, ಯಾವಾಗ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಯವರು) ಶ್ರೀ ಪಿ.ಜಿ.ಆರ್.ಸಿಂಧ್ಯ (ಮಾನ್ಯ ಮುಖ್ಯ ಮಂತ್ರಿಯ ಪರವಾಗಿ)

ಅ. ಕೋಲಾರ ಜಿಲ್ಲೆಯಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕನ್ನು ಸ್ಥಾಪಿಸಲು ಯಾವುದೇ ಮಾಹಿತಿ ತಂತ್ರಜ್ಞಾನ ಉದ್ದಿಮೆಗಳು, ಉದ್ಯಮಶೀಲರು ಅಥವಾ ಸಾಕಷ್ಟು ಸಂಸ್ಥೆಗಳು ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳ ಸ್ಥಾಪನೆ ಬಗ್ಗೆ ಆಸಕ್ತಿ ತೋರಿಸಿ ಮುಂದೆ ಬಂದಿರುವುದಿಲ್ಲ.